6	ಗೋಮರ್ಸಿ	25 ಕೆ.ವಿ.ಎ	6.2.2010
7	ಹೆಡಗಿನಾಳ	25 ಕೆ.ವಿ.ಎ	20.2.2010
8	ರಾರಪೂರ	100 ಕೆ.ವಿ.ಎ	18.2.2010
9	ಕನ್ನಾರಿ	100 ಕೆ.ವಿ.ಎ	26.2.2010

ಆ) ಮತ್ತು ಇ) ಸುಟ್ಟು ಹೋಗಿರುವ ವಿದ್ಯುತ್ ಪರಿವರ್ತಕಗಳನ್ನು ತ್ವರಿತಗತಿಯಲ್ಲಿ ದುರಸ್ತಿ ಮಾಡಿ ಆದ್ಯತೆ ಮೇಲೆ ಬದಲಾಯಿಸಲಾಗುವುದು.

ಈ) ಹೊಸ ಪರಿವರ್ತಕಗಳಿಗೆ ತಗಲುವ ವೆಚ್ ರೂ. 5,40,000/-

ರಾಯಚೂರಿನಲ್ಲಿ ಸಂಚಾರಿ ಆರಕ್ಷಕ ಠಾಣೆ ಪ್ರಾರಂಭಿಸುವ ಬಗ್ಗೆ

187 (321) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ ಸಂಚಾರಿ ಆರಕ್ಷಕ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸಂಚಾರಿ ಆರಕ್ಷಕ ಠಾಣೆಗಾಗಿ ಸ್ಥಳ ಗುರ್ತಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ನಗರದ ಯಾವ ಭಾಗದಲ್ಲಿ, ಎಷ್ಟು ವಿಸ್ತೀರ್ಣದ ಸ್ಥಳವನ್ನು ಗುರ್ತಿಸಲಾಗಿದೆ;

ಈ) ಹಾಗಿದ್ದಲ್ಲಿ, ಸಂಚಾರಿ ಆರಕ್ಷಕ ಠಾಣೆಯ ಕಟ್ಟಡ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಡಾ॥ ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಮುಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಪೊಲೀಸ್ ಠಾಣೆಗಳನ್ನು ತೆರೆಯಲು ಒದಗಿಸುವ ಅನುದಾನದ ಲಭ್ಯತೆಯನ್ನನುಸರಿಸಿ ಸಿಂಧನೂರು ತಾಲ್ಲೂಕಿನಲ್ಲಿ ಸಂಚಾರ ಪೊಲೀಸ್ ಠಾಣೆ ತೆರೆಯಲು ಪರಿಶೀಲಿಸಲಾಗುವುದು.